ಇನ್ನು ಹೋಗಿ ಅವಳಲ್ಲಿ 'ಸಾರಿ' ಎಂದು ಕೇಳಲೇ? ಯಾವ ತಪ್ಪಿಗಾಗಿ? ಅವಳ ಕಾಲುಹಿಡಿದು ಉಳಿಯುವ ಅವಶ್ಯಕತೆ ತನಗೆಷ್ಟಿದೆ? ಅಪ್ಪನ ದುಡ್ಡನ್ನು ಹೇಗಾದರೂ ದುಡಿದು ತೀರಿಸಬಲ್ಲೆ ಎಂದು ಯೋಚಿಸುತ್ತಲೇ ಅವನಿಗೆ ನಿರಾಳವಾಗಿತ್ತು.

ರಾಜೀನಾಮೆ ಪತ್ರವನ್ನು ಬರೆದು ಒಪ್ಪಿಸಿಬಿಟ್ಟಿದ್ದ. ಭಾರತಕ್ಕೆ ಹೋಗವ ಮುನ್ನ ಅವನ ಫೋನಿನಲ್ಲಿ ಆ ತಿಂಗಳ ಒಪ್ಪಂದದಲ್ಲಿ ಉಳಿದದ್ದ ಸುಮಾರು ನಾಲ್ಕು ಗಂಟೆಗಳಷ್ಟು ಬಿಟ್ಟಿ ನಿಮಿಷಗಳನ್ನು ವಿಶ್ವನೊಡನೆ ಮಾತಾಡಿ, ನಡೆದದ್ದೆಲ್ಲ ಹೇಳಿ, ಎಚ್ಚರವಾಗಿರಲು ಉಪದೇಶಿಸಿ ಹೊರಟು ಹೋಗಿದ್ದ!

★★★

ಆಗ ವಿಶ್ವನಿಗೆ ರಾಮಚಂದ್ರನ್ ಸ್ಥಿತಿಯ ಬಗ್ಗೆ ಮರುಕವಾಗಿತ್ತು. ತನ್ನ ಗೆಳೆಯನದೂ ತಪ್ಪಿರಬಹುದೇನೋ ಎನ್ನುವ ಗುಮಾನಿಯಾಗಿತ್ತು. ದುಡುಕಿದ ಅನಿಸಿತ್ತು. ಆದರೆ, ಈಗ ರಾಮಚಂದ್ರನ್ ಮಾಡಿದ್ದು ಪೂರ್ತಿ ಸರಿಯೆನಿಸತೊಡಗಿತ್ತು.

ತಾನು ದೊಡ್ಡ ಅಪರಾಧ ಮಾಡಿಬಿಟ್ಟಿದ್ದೇನೆ ಅಂತ ಬಲವಾಗಿ ಅನ್ನಿಸತೊಡಗಿತು. ಅಷ್ಟಕ್ಕೂ ವಿಶ್ವ

